## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಸರ್ಕಾರದ ವಸತಿ ಯೋಜನೆಗಳನ್ನು ಯಶಸ್ವಿಯಾಗಿ, ನಿಗದಿತ ಅವಧಿಯಲ್ಲಿ ಮತ್ತು ತ್ವರಿತವಾಗಿ ಅನುಷ್ಠಾನಗೊಳಿಸಲು ಬಸವ ಗ್ರಾಮೀಣ ವಸತಿ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆ ಮತ್ತು ಡಿ.ದೇವರಾಜ ಅರಸು ವಿಶೇಷ ವಸತಿ ಯೋಜನೆಗಳ ಮಾರ್ಗಸೂಚಿಗಳನ್ನು ಸರಳೀಕರಣಗೊಳಿಸುವ ಕುರಿತು

---0---

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ವಇ 39 ಹೆಚ್ಎಹೆಚ್ 2013, ದಿನಾಂಕ:20.05.2013.
2. ಸರ್ಕಾರದ ಆದೇಶ ಸಂಖ್ಯೆ: ವಇ 114 ಹೆಚ್ಎಹೆಚ್ 2015, ದಿನಾಂಕ:19.11.2015.
3. ಸರ್ಕಾರದ ಆದೇಶ ಸಂಖ್ಯೆ: ವಇ 33 ಹೆಚ್ಎಹೆಚ್ 2013, ದಿನಾಂಕ:29.09.2014.
4. ಸರ್ಕಾರದ ಆದೇಶ ಸಂಖ್ಯೆ: ವಇ 36 ಹೆಚ್ಎಹೆಚ್ 2016, ದಿನಾಂಕ:29.04.2016.
5. ಸರ್ಕಾರದ ಆದೇಶ ಸಂಖ್ಯೆ: ವಇ 67 ಹೆಚ್ಎಹೆಚ್ 2015, ದಿನಾಂಕ:16.11.2015.

ಪ್ರಸ್ತಾವನೆ:

ಸರ್ಕಾರವು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ಮೂಲಕ ಈ ಕೆಳಕಂಡ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ:-

1. ಬಸವ ಗ್ರಾಮೀಣ ವಸತಿ ಯೋಜನೆ
2. ವಾಜಪೇಯಿ ನಗರ ವಸತಿ ಯೋಜನೆ
3. ದೇವರಾಜ್ ಅರಸು ವಿಶೇಷ ವಸತಿ ಯೋಜನೆ

ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (2)ರ ಸರ್ಕಾರಿ ಆದೇಶಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅನುಷ್ಠಾನಗೊಳಿಸುತ್ತಿರುವ ಬಸವ ವಸತಿ ಮತ್ತು ನಗರ ಪ್ರದೇಶದಲ್ಲಿ ಅನುಷ್ಠಾನಗೊಳಿಸುತ್ತಿರುವ ವಾಜಪೇಯಿ ನಗರ ವಸತಿ ಯೋಜನೆಗಳಡಿ, ಸಾಮಾನ್ಯ ವರ್ಗದವರಿಗೆ ರೂ.1.20ಲಕ್ಷ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೂ.1.50ಲಕ್ಷ ಸಹಾಯಧನವನ್ನು ನಿಗದಿಪಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ಮತ್ತು (4)ರಲ್ಲಿನ ಸರ್ಕಾರಿ ಆದೇಶಗಳಲ್ಲಿ ವಿಶೇಷ ವರ್ಗದವರಿಗಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ದೇವರಾಜ ಅರಸು ವಸತಿ ಯೋಜನೆಯನ್ನು ಜಾರಿಗೆ ತಂದಿದ್ದು, ಸಾಮಾನ್ಯ ವರ್ಗದವರಿಗೆ ರೂ.1.20ಲಕ್ಷ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೂ.1.50ಲಕ್ಷ ಸಹಾಯಧನವನ್ನು ನಿಗದಿಪಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(5)ರಲ್ಲಿರುವ ಸರ್ಕಾರಿ ಆದೇಶದಲ್ಲಿ ವಸತಿ ಇಲಾಖೆಯ ಮುಖಾಂತರ ವಿವಿಧ ವಸತಿ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಆಗುತ್ತಿದ್ದ ವಿಳಂಭ ಮತ್ತು ನ್ಯೂನ್ಯತೆಗಳನ್ನು ಸರಿಪಡಿಸಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು. ಅದೇ ಸಂಖ್ಯೆಯ ಮತ್ತು ದಿನಾಂಕದ ಮತ್ತೊಂದು ಆದೇಶದಲ್ಲಿ ಜಾಗೃತ ಸಮಿತಿಯನ್ನು ರಚಿಸಿ, ಜಾಗೃತ ಸಮಿತಿಯ ಜವಾಬ್ದಾರಿಯನ್ನು ನಿಗದಿಪಡಿಸಲಾಗಿರುತ್ತದೆ.

ಆದರೆ, ಸದರಿ ಮಾರ್ಗಸೂಚಿಗಳಲ್ಲಿ ತಿಳಿಸಿರುವ ಹಲವಾರು ಆಯ್ಕೆ ವಿಧಾನಗಳಿಂದಾಗಿ ಫಲಾನುಭವಿಗಳ ಆಯ್ಕೆಯು ವಿಳಂಬವಾಗುತ್ತಿದೆ, ಅವುಗಳೆಂದರೆ, ಗುರಿಯ ಹಂಚಿಕೆ, ಗ್ರಾಮಸಭೆ ನಡೆಸುವುದು, ಕೆಲವು ಪ್ರವರ್ಗಗಳಲ್ಲಿ ಫಲಾನುಭವಿಗಳು ದೊರೆಯದಿರುವುದು ಮತ್ತು ಆಶ್ರಯ ಹಾಗೂ ಜಾಗೃತ ಸಮಿತಿಗಳ ಅನುಮೋದನೆ ಪಡೆಯುವುದು ಸೇರಿರುತ್ತದೆ. ಫಲಾನುಭವಿಗಳ ಆಯ್ಕೆಯನ್ನು ಅಂತಿಮಗೊಳಿಸಲು ಒಂದೂವರೆ ವರ್ಷಕ್ಕಿಂತ ಹೆಚ್ಚಿನ ಅವಧಿಯನ್ನು ತೆಗೆದುಕೊಳ್ಳಲಾಗುತ್ತಿದೆ. ಇದರಿಂದಾಗಿ ಮನೆಗಳ ನಿರ್ಮಾಣವನ್ನು ಪೂರೈಸಲು ವಿಳಂಬವಾಗುತ್ತಿದೆ. ಆದುದರಿಂದ, ಫಲಾನುಭವಿಗಳ ಆಯ್ಕೆಗೇ ಅತಿಯಾದ ಒತ್ತು ನೀಡುವಿಕೆ ಇರಬಾರದೆಂಬ ಕಾರಣದಿಂದ ಆಯ್ಕೆ ವಿಧಾನಗಳ ಸರಳೀಕರಣದ ಅವಶ್ಯಕತೆ ಇದೆ. ಈ ಪ್ರಸ್ತಾವನೆಯು, ಫಲಾನುಭವಿಗಳ ಆಯ್ಕೆಯ ಪ್ರಕ್ರಿಯೆಯಲ್ಲಿನ ಕೊರತೆಯನ್ನು ನೀಗಿಸುವ ಗುರಿಯನ್ನು ಹೊಂದಿದೆ. ಅದಕ್ಕಾಗಿ, ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವ ವಿಧಾನಗಳನ್ನು ಸರಳೀಕರಣಗೊಳಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ, ಸರ್ಕಾರದ ವಸತಿ ಯೋಜನೆಗಳನ್ನು ಯಶಸ್ವಿಯಾಗಿ, ನಿಗದಿತ ಅವಧಿಯಲ್ಲಿ ಮತ್ತು ತ್ವರಿತವಾಗಿ ಅನುಷ್ಠಾನಗೊಳಿಸಲು ಬಸವ ಗ್ರಾಮೀಣ ವಸತಿ ಯೋಜನೆ, ವಾಜಪೇಯಿ ನಗರ ವಸತಿ ಯೋಜನೆ ಮತ್ತು ಡಿ.ದೇವರಾಜ ಅರಸು ವಿಶೇಷ ವಸತಿ ಯೋಜನೆಗಳಡಿ ಗುರಿ ನಿಗಧಿ, ಫಲಾನುಭವಿಗಳ ಆಯ್ಕೆ ಮತ್ತು ಫಲಾನುಭವಿಗಳ ಆಯ್ಕೆಯಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಸರಳೀಕರಣಗೊಳಿಸುವ ಕುರಿತು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಇ 35 ಹೆಚ್‌ಎಹೆಚ್ 2017(2), ಬೆಂಗಳೂರು, ದಿನಾಂಕ:05.06.2017.**

ಮೇಲಿನ ಪ್ರಸ್ತಾವನೆಯ ಹಿನ್ನಲೆಯಲ್ಲಿ, ರಾಜ್ಯದ ಎಲ್ಲ ವಸತಿ ಯೋಜನೆಗಳ ಗುರಿಯನ್ನು ಮೂರು ಭಾಗಗಳಾಗಿ ವಿಭಾಗಿಸಿ, ಯೋಜನಾವಾರು ಗುರಿ ಹಂಚಿಕೆ ಮಾಡಿ ಆದೇಶಿಸಿದೆ (ಡಾ॥ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯು ಬೇಡಿಕೆಯಾಧಾರಿತವಾಗಿರುವುದರಿಂದ ಅದನ್ನು ಹೊರತುಪಡಿಸಿ);

ಅ) ವಿಧಾನಸಭಾ ಕ್ಷೇತ್ರವಾರು ಜನಸಂಖ್ಯೆಯಾಧಾರಿತ.
ಆ) ಬೇಡಿಕೆ ಅಥವಾ ಅರ್ಹತೆಯ ಅಗತ್ಯತೆಯ ಗುರಿಯಾಧಾರಿತ.
ಇ) ಸ್ಥಳೀಯ ಸಂಸ್ಥೆಗಳಿಗೆ ಜನಸಂಖ್ಯೆಗೆ ಅನುಗುಣವಾಗಿ.

1. ರಾಜ್ಯದ ವಸತಿ ಯೋಜನೆಗಳ ಗುರಿಯನ್ನು ಈ ಕೆಳಗೆ ತಿಳಿಸಿರುವಂತೆ ಹಂಚಿಕೆ ಮಾಡುವುದು.

<u>(1) ಬಸವ ಗ್ರಾಮೀಣ ವಸತಿ ಯೋಜನೆ:–</u>

ಅ) ಶೇ.60 ರಷ್ಟನ್ನು ವಿಧಾನಸಭಾ ಕ್ಷೇತ್ರವಾರು ಸಾಮಾನ್ಯ ವರ್ಗದವರಿಗಾಗಿ ಮಾತ್ರ ಗುರಿ ಹಂಚಿಕೆ. ಅದರಲ್ಲಿ –

(i) ಶೇ.60ರಷ್ಟನ್ನು ಗ್ರಾಮ ಪಂಚಾಯಿತಿವಾರು ಹಂಚಿಕೆಯನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ಮೂಲಕ ಗುರಿ ಹಂಚಿಕೆ ಮಾಡುವುದು.

(ii) ಶೇ.40ರಷ್ಟನ್ನು ಗ್ರಾಮ ಪಂಚಾಯಿತಿವಾರು ಅರ್ಹತೆಯ ಅಗತ್ಯತೆಯ ಗುರಿಯನ್ನು ಜಾಗೃತಿ ಸಮಿತಿಯಿಂದ ಹಂಚಿಕೆ ಮಾಡುವುದು.

ಆ) ಶೇ.30ರಷ್ಟನ್ನು ಗ್ರಾಮ ಪಂಚಾಯಿತಿವಾರು ಅರ್ಹತೆಯ ಅಗತ್ಯತೆಯ ಗುರಿಯನ್ನು ಸರ್ಕಾರದಿಂದ ಹಂಚಿಕೆ ಮಾಡುವುದು.

ಇ) ಶೇ.10ರಷ್ಟನ್ನು ವಿಶೇಷ ಅಗತ್ಯತೆಗೆ ಅಂದರೆ, ನೆರೆಪೀಡಿತ ಪ್ರದೇಶ, ಯೋಜನಾ ನಿರ್ವಸತಿಗಾಗಿ, ಪ್ರಕೃತಿ ವಿಕೋಪ ಇತ್ಯಾದಿಗಳಿಗಾಗಿ ಗ್ರಾಮ ಪಂಚಾಯಿತಿವಾರು ಸರ್ಕಾರದಿಂದ ಹಂಚಿಕೆ ಮಾಡುವುದು.

3..

**(2) ವಾಜಪೇಯಿ ನಗರ ವಸತಿ ಯೋಜನೆ:**

ಅ) ಶೇ.25ರಷ್ಟನ್ನು ಅರ್ಹತೆಯ ಅಗತ್ಯತೆಗಾಗಿ ಸರ್ಕಾರದ ಮೂಲಕ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡಲು ವಾರ್ಷಿಕ ಗುರಿಯನ್ನು ಮೀಸಲಿರಿಸುವುದು;

ಆ) ತದನಂತರ, ಪ್ರತಿ ವರ್ಷವು, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಯೋಜನೆಗಳೊಂದಿಗೆ ಸಮನ್ವಯಗೊಳಿಸಿಕೊಂಡು ನಿರ್ದಿಷ್ಟ ಗುರಿಯನ್ನು ನೀಡುವ ಅಥವಾ ತಳ್ಳಿಹಾಕುವ ನಿರ್ಧಾರವನ್ನು ಸರ್ಕಾರ ಹೊಂದಿರುತ್ತದೆ;

ಇ) ಶೇ.25ರಷ್ಟು ಸ್ಥಳೀಯ ಸಂಸ್ಥೆಗಳಿಗೆ ಲಂಬೀಯ ಕಟ್ಟಡ ನಿರ್ಮಾಣಕ್ಕಾಗಿ;

ಈ) ಬಾಕಿ ಉಳಿದಿದ್ದನ್ನು ಜನಸಂಖ್ಯೆಗನುಗುಣವಾಗಿ ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆ ಮಾಡುವುದು.
(ಪ್ರತಿ ಸ್ಥಳೀಯ ಸಂಸ್ಥೆಗೆ ಕನಿಷ್ಠ 20 ಘಟಕಗಳು)

**(3) ಡಿ. ದೇವರಾಜ ಅರಸು ವಿಶೇಷ ವಸತಿ ಯೋಜನೆ:**

ಅ) ಶೇ.70ರಷ್ಟನ್ನು ಜನಸಂಖ್ಯೆಗನುಗುಣವಾಗಿ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡುವುದು.

ಆ) ಶೇ.30ರಷ್ಟನ್ನು ಅರ್ಹತೆಯ ಅಗತ್ಯತೆಗಾಗಿ ಗ್ರಾಮ ಪಂಚಾಯಿತಿಗಳಿಗೆ/ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದ ಮೂಲಕ ಹಂಚಿಕೆ ಮಾಡುವುದು.

ಮೇಲೆ ತಿಳಿಸಿರುವ ಮೂರು ಯೋಜನೆಗಳಲ್ಲಿ ಶೇಕಡ 10ರಷ್ಟನ್ನು ಅಲ್ಪಸಂಖ್ಯಾತರಿಗಾಗಿ ಮೀಸಲಿರಿಸುವುದು.

ವಸತಿ ಯೋಜನೆಗಳನ್ನು ಕೈಗೊಳ್ಳುವ ಪ್ರದೇಶಗಳಲ್ಲಿ ಎಲ್ಲಿಲ್ಲಿ ಸಾಧ್ಯವೋ ಅಂತಹ ಕಡೆಗಳಲ್ಲೆಲ್ಲ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸುವುದು.

ಸರ್ಕಾರದ ವಸತಿ ಯೋಜನೆಗಳಾದ ಬಸವ ಗ್ರಾಮೀಣ ವಸತಿ ಯೋಜನೆ, ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ(ಗ್ರಾಮೀಣ ಮತ್ತು ನಗರ) ಮತ್ತು ವಾಜಪೇಯಿ ನಗರ ವಸತಿ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆಯ ವಿಧಾನಗಳು ಮತ್ತು ಬಳಕೆಯಾಗದ ಗುರಿಯನ್ನು ಮರು ಹಂಚಿಕೆ ಮಾಡಲು ಅನುಸರಿಬೇಕಾದ ವಿಧಾನಗಳನ್ನು ಅನುಬಂಧದಲ್ಲಿ ವಿವರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,
(ಶಿವಕುಮಾರಸ್ವಾಮಿ.ಸಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ–2,
ವಸತಿ ಇಲಾಖೆ.

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) (ಇ & ಆರ್ ಎಸ್ಎ), ಕರ್ನಾಟಕ ಬೆಂಗಳೂರು.
2) ಮಹಾಲೇಖಪಾಲರು(ಎ&ಇ) ಕರ್ನಾಟಕ ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು.
4) ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು.
5) ಎಲ್ಲಾ ಜಿಲ್ಲಾಧಿಕಾರಿಗಳು.
6) ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
7) ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳು.

(5–7: ವ್ಯ.ನಿ.,ರಾ.ಗಾಂ.ಗ್ರಾ.ವ.ನಿ.ನಿ. ಇವರ ಮುಖಾಂತರ ಹೊರಡಿಸುವುದು.)

8) ಶಾಖಾ ರಕ್ಷಾ ಕಡತ/ಹೆಚ್ಚಿನ ಪ್ರತಿಗಳು.

4...

<u>ಪ್ರತಿ ಮಾಹಿತಿಗಾಗಿ:</u>

1. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2. ಮಾನ್ಯ ವಸತಿ ಸಚಿವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ(ಸಚಿವರ ಸಂಪುಟ ಪ್ರಕರಣ ಸಂಖ್ಯೆ:ಸಿ.351/2017ರ ಮಾಹಿತಿಗಾಗಿ), ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
7. ಜಂಟಿ ನಿರ್ದೇಶಕರು(ಯೋಜನೆ), ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ.
8. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು.